ಓ.ಎಸ್. ನಂ. 88/2022
ಪಿ.ಡಬ್ಲ್ಯೂ- 1

(ಇಂದು ದಿಃ 05-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು :- ಶ್ರೀ ಎ ಎಂ ವಕೀಲರಿಂದ :-

ದಾವಾ ಸ್ವತ್ತುಗಳು ಮೂಲತಃ ದೊಡ್ಡಬಸಪ್ಪರವರಿಗೆ ಸೇರಿದ್ದವು. ದೊಡ್ಡಬಸಪ್ಪನ ತಂದೆಯ ಹೆಸರು ಬಸಪ್ಪ. ನಾಗಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ದೊಡ್ಡ ಬಸಪ್ಪನ ಹೆಸರು ನಾಗಪ್ಪ ಎಂದರೆ ಸರಿಯಲ್ಲ. ದೊಡ್ಡಬಸಪ್ಪನ ಹೆಂಡತಿ ಹೆಸರು ನೀಲಮ್ಮ. ದೊಡ್ಡಬಸಪ್ಪನಿಗೆ ಇಬ್ಬರು ಮಕ್ಕಳು. ಅವರುಗಳೆಂದರೆ ಸೂಗಮ್ಮ ಮತ್ತು ಈರಮ್ಮ. ಸೂಗಮ್ಮರವರನ್ನು ಸಣ್ಣಬಸಪ್ಪ ಮದುವೆ ಆಗಿದ್ದರು. ಈರಮ್ಮನನ್ನು ಲಿಂಗಪ್ಪನಿಗೆ ಮದುವೆ ಮಾಡಿಕೊಟ್ಟರು. ನಾನು ಬಸಪ್ಪನ ಹೆಸರಿನಲ್ಲಿ ಇರುವ ದಾಖಲಾತಿಗಳಿಂದ ಇಲ್ಲಿಯವರೆಗೆ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ. ದಾವಾ ಸ್ವತ್ತುಗಳು ಪೂರ್ವಜರಿಂದ ಬಂದಿವೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಹೆಸರಿನಲ್ಲಿರುವ ಕೆಲ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವು ನನ್ನ ತಂದೆ ಸ್ವತ್ತುಗಳು ಎಂದು ಹೇಳುತ್ತಾರೆ. ನನ್ನ ತಂದೆಯ ತಂದೆ ಸಂಗಪ್ಪ. ದಾವಾ ಸ್ವತ್ತುಗಳು ಸಂಪೂರ್ಣವಾಗಿ ಪ್ರತಿವಾದಿಯರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ.

ಸೂಗಮ್ಮನ ಗಂಡನ ಹೆಸರು ಬಸಪ್ಪ ತಂದೆ ಬಸಪ್ಪ ಎಂದರೆ ಸಣ್ಣ ಬಸಪ್ಪ ತಂದೆ ಬಸಪ್ಪ ಎಂದು ಹೇಳುತ್ತಾರೆ. ಸದರಿ ಬಸಪ್ಪನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೆಯ ಹೆಂಡತಿ ಸೂಗಮ್ಮ 2 ನೇ ಹೆಂಡತಿ ಶಿವನಾಗಮ್ಮ ಎಂದರೆ ಸರಿ. ಸೂಗಮ್ಮನ ಮಗ ದೊಡ್ಡ ಶರಣಪ್ಪ ಎಂದರೆ ಸರಿ. ದೊಡ್ಡ ಶರಣಪ್ಪನ ಹೆಂಡತಿ 1 ನೇ ಪ್ರತಿವಾದಿ ಎಂದರೆ ಸರಿ. ಶಿವನಾಗಮ್ಮನ ಮಗ ಮಹಾದೇವ ತೀರಿಹೋಗಿದ್ದಾರೆ. ಇನ್ನೊಬ್ಬ ಮಗ ಸಣ್ಣ ಶರಣಪ್ಪ ಕೂಡ ತೀರಿಹೋಗಿದ್ದಾರೆ. ಬಸಪ್ಪ ತಂದೆ ಬಸಪ್ಪ ಮೃತ್ಯು ಪತ್ರ ಬರೆದಿಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಅದರಲ್ಲಿ ಎಲ್ಲಾ ಸರ್ವೆ ನಂ.ಗಳನ್ನು ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮೃತ್ಯು ಪತ್ರದಲ್ಲಿ ಬಸಪ್ಪ ತಂದೆ ಬಸಪ್ಪರವರ ಮಕ್ಕಳಾದ ಸೂಗಮ್ಮರವರಿಗೆ ಸೇರಿದ್ದು ಎಂದು ವಿಲ್ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಇದಕ್ಕಿಂತ ಮುಂಚೆ 1989 ರಲ್ಲಿ ಒಂದು ದಾವೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಈ ದಾವೆಯ ಪ್ರತಿವಾದಿಗಳ ಪರ ತೀರ್ಮಾನ ಆಯಿತು ಎಂದರೆ ನನಗೆ ಗೊತ್ತಿಲ್ಲ. ದಾವಾ

ಸ್ವತ್ತುಗಳಲ್ಲಿನ ಭಾಗವನ್ನು ಪ್ರತಿವಾದಿಯರು ಹಲವಾರು ಜನರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಭಾಗದ ಸ್ವತ್ತನ್ನು ನಾನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.

ದೊಡ್ಡಶರಣಪ್ಪ ತಂದೆ ಬಸಣ್ಣ ಆವಂಟಿರವರು 1989 ರಲ್ಲಿ ದಾವಾ ಸ್ವತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ಖರೀದಿದಾರರು ದಾವಾ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.